**ಸಾಕ್ಷಿಯನ್ನು ದಿಃ 07.04.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಸಾಕ್ಷಿಯು ಈಗಾಗಲೇ ಗುರುತಿಸಲಾಗಿರುವ ನಿಪಿ. 1 ರಿಂದ ನಿಪಿ. 14 ದಾಖಲೆಗಳನ್ನು ನಿಶಾನೆಗಳಾಗಿ ಪರಿಗಣಿಸಲು ಕೋರಿಕೊಂಡಿರುತ್ತಾರೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ದೂರು ನೀಡಿರುವ ದೇವರಾಜು ರವರು ಮತ್ತೊಂದು ವಾಹನದ ಚಾಲಕರು. ಅವರಿಗೆ ಅಪಘಾತದಲ್ಲಿ ಗಾಯಗಳಾಗಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ನಾನಾಗಲೀ ನನ್ನ ಕುಟುಂಬದವರಾಗಲೀ ಪ್ರತ್ಯೇಕವಾಗಿ ದೂರು ನೀಡಿಲ್ಲ. ನಾನು ಹೋಗುತ್ತಿದ್ದ ಮೋಟಾರ್ ಸೈಕಲ್ ಅನ್ನು ನನ್ನ ಸ್ನೇಹಿತ ಪವನ್ ಚಲಾಯಿಸುತ್ತಿದ್ದ. ಆತನಿಗೆ ವಾಹನ ಚಾಲನ ಪರವಾನಗಿ ಇತ್ತು. ಅದನ್ನು ಹಾಜರು ಪಡಿಸಿದ್ದೇನೆ. ಪವನ್ ಗೆ ಯಾವುದೇ ಚಾಲನ ಪರವಾನಗಿ ಇರಲಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ನಾನು ಅದನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಒಂದು ವಾರ ಆಸ್ಪತ್ರೆಯಲ್ಲಿದ್ದೆ. ದೇವರಾಜು ರವರು 12 ದಿನ ತಡವಾಗಿ ದೂರು ನೀಡಿದ್ದಾರೆ ಎಂದರೆ ಸರಿ. ದೇವರಾಜು ನನಗೆ ಪರಿಚಿತರಲ್ಲ. ದೇವರಾಜು ಜೊತೆ ಸಹ ಹಿಂಬದಿ ಸವಾರರಿದ್ದರು. ನಾನು, ಪವನ್ ಹಾಗೂ ದೇವರಾಜು ಹಾಗೂ ಅವರ ಹಿಂಬದಿ ಸವಾರ ಪೋಲೀಸರೊಂದಿಗೆ ಶಾಮಿಲಾಗಿ ಸುಳ್ಳು ಪ್ರಕರಣ ದಾಖಲಾಗುವಂತೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಅಪಘಾತದ ಸಂದರ್ಭದಲ್ಲಿ ನಾನೇ ವಾಹನ ಚಲಾಯಿಸುತ್ತಿದ್ದೆ ಎಂದು ಗಾಯಾದ ಪ್ರಮಾಣ ಪತ್ರ ಹಾಗೂ ಬಿಡುಗಡೆ ಪತ್ರದಲ್ಲಿ ನಮೂದಿದೆ ಎಂದರೆ ನನಗೆ ಜ್ಞಾನ ತಪ್ಪಿತ್ತು ಎನ್ನುತ್ತಾರೆ. ಈ ಮಾಹಿತಿಯನ್ನು ನಾನೇ ವೈದ್ಯರಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ದೋಷರೋಪಣಾ ಪಟ್ಟಿಯಲ್ಲಿ ಸಾಕ್ಷಿ 2 ಆಗಿ ಸುನೀಲ್ ಬಿನ್ ರಾಮೇಗೌಡ ಎನ್ನುವವರನ್ನು ತೋರಿಸಿದ್ದು ನನ್ನನ್ನು ಕಾಣಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

ದೋಷರೋಪಣಾ ಪಟ್ಟಿಯಲ್ಲಿ ನನ್ನ ಹೆಸರು ಎಲ್ಲಿಯೂ ನನ್ನ ಹೆಸರು ಇಲ್ಲ ಎಂದರೆ ನನಗೆ ಗೊತ್ತಿಲ್ಲ.

2. ಅಪಘಾತದ ಸ್ಥಳವನ್ನು ನಾನೇ ತೋರಿಸಿರುವುದಾಗಿ ನನ್ನನ್ನು ಸಾಕ್ಷಿದಾರರನ್ನಾಗಿ ಮಾಡಿ ಮಹಜರ್ ನಲ್ಲಿ ನನ್ನ ಸಹಿ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ. 3 ರಲ್ಲಿರುವ ಸಹಿ ನನ್ನದಲ್ಲ. ಈಗ ನನಗೆ ತೋರಿಸುತ್ತಿರುವ ವಕಾಲತ್ ನಲ್ಲಿ ಇರುವ ಸಹಿ ನನ್ನದು. ನಿಪಿ. 3 ಹಾಗೂ ವಕಾಲತ್ ನಲ್ಲಿರುವ ಸಹಿ ಒಂದೇ ತರ ಕಾಣುತ್ತದೆ ಎಂದರೆ ಸರಿಯಲ್ಲ. ನಿಪಿ. 3 ರಲ್ಲಿ ಇರುವ ಸಹಿ ನನ್ನದಲ್ಲ. ಅದರಲ್ಲಿ ನಮೂದಿಸಿರುವ ಮಾಹಿತಿ ನನಗೆ ಸಂಬಂಧಿಸಿದ್ದು. ನನ್ನ ಪ್ರಮಾಣ ಪತ್ರದಲ್ಲಿ ಇರುವ ಸಹಿಗೂ ವಕಾಲತ್ ನಲ್ಲಿರುವ ಸಹಿಗೂ ವೆತ್ಯಾಸ ಇದೆ ಎಂದರೆ ಸರಿ. ನಿಪಿ. 3 ರಲ್ಲಿ ನಾನೇ ಸಹಿ ಮಾಡಿದ್ದರೂ ಉದ್ದೇಶಪೂರ್ವಕವಾಗಿ ನನ್ನದಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾನೇ ವಾಹನ ಚಲಾಯಿಸುತ್ತಿದ್ದು ನನ್ನ ಅಜಾಗರೂಕತೆಯಿಂದ ಅಪಘಾತ ಆಗಿದ್ದು ಬೇರೆ ಯಾರು ಕಾರಣ ಕರ್ತರಲ್ಲ ಎಂದರೆ ಸರಿಯಲ್ಲ. ಎದುರುದಾರರ ವಾಹದ ಇದ್ದಕ್ಕಿದ್ದ ಹಾಗೆ ಅಡ್ಡ ಬಂದಿರುತ್ತಾರೆ. ನಕ್ಷೆಯ ಪ್ರಕಾರ ಬಲಭಾಗಕ್ಕೆ ಯಾವುದೇ ರಸ್ತೆ ಇಲ್ಲ ಎಂದರೆ ಸರಿ. ಅಪಘಾತ ಸ್ಥಳವನ್ನು ರಸ್ತೆಯ ಮಧ್ಯಭಾಗದಲ್ಲಿ ಕಾಣಿಸಿದ್ದಾರೆ ಎಂದರೆ ಸರಿ. ಕೆಎ-45-7538 ಚಾಲಕ ಏಕಾಏಕಿ ಅಡ್ಡ ಬಂದಿರುತ್ತಾರೆ. ಅಪಘಾತಕ್ಕೆ ಅವರ ನಿರ್ಲಕ್ಷ್ಯತನ ಕಾರಣ ಎಂದರೆ ಸರಿ. ಅಪಘಾತದಲ್ಲಿ ನನ್ನ ಪ್ರಕಾರ ಪವನ್ ನ ತಪ್ಪಿಲ್ಲ. ಮತ್ತೊಂದು ವಾಹನದವರು ಅಡ್ಡ ಬಂದಿರುತ್ತಾರೆ. ಅಪಘಾತದಿಂದಾದ ಗಾಯಗಳು ವಾಸಿಯಾಗಿದೆ ಎಂದರೆ ಸರಿ. ಒಳಗಿನಿಂದ ನೋವಿದೆ ಎನ್ನುತ್ತಾರೆ. ಕೊನೆಯಬಾರಿ ಮೂರು ತಿಂಗಳ ಹಿಂದೆ ವೈಧ್ಯರಲ್ಲಿಗೆ ಹೋಗಿದ್ದೇನೆ. ಆಗ ಚೀಟಿ ಬರೆದುಕೊಟ್ಟಿದ್ದಾರೆ. ನನ್ನ ಆರೋಗ್ಯ ಸುಧಾರಿಸಿದ್ದು ಯಾವುದೇ ಸಮಸ್ಯೆ ಇಲ್ಲ ಎಂದರೆ ಸರಿಯಲ್ಲ. ನಾನು ಹಿಂದೆ ಮಾಡುತ್ತಿದ್ದ ಕೆಲಸವನ್ನು ಈಗಲೂ ಮುಂದುವರಿಸಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಸಮಸ್ಯೆಗಳು ನನಗೆ ಈಗ ಇಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಔಷಧಿ ಬಿಲ್ಲುಗಳ ಪ್ರಮಾಣದಲ್ಲಿ ನಾನು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಎದುರುದಾರರ ವಾಹನದ ತಪ್ಪಿದಿಂದ ಅಪಘಾತ ಆಗಿದೆ ಎನ್ನುವ ಕಾರಣಕ್ಕೆ ನಾನು ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

1 ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.